S C.R.P.67

| |
|---|
| Form No.4<br>(Criminal)<br>Deposition<br>Sheets<br>(R.P.No.57) |

## 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

# ಸ್ಪೆಷಲ್ ಕೇಸ್ ನಂಬರ್‌ಃ 167/2020

ಚಾ.ಸಾ.–03 ಪ್ರಾ.ಸಾ.–08

| | |
|---|---|
| ಸಾಕ್ಷಿದಾರರ ಹೆಸರು | ಪ್ರಕಾಶ |
| ತಂದೆಯ ಹೆಸರು | ಮಂಟೆಲಿಂಗಯ್ಯ |
| ವಯಸ್ಸು | 42 ವರ್ಷಗಳು |
| ಉದ್ಯೋಗ | ಕೂಲಿ ಕೆಲಸ |
| ವಾಸ | ಮುತ್ತನಹಳ್ಳಿ ಗ್ರಾಮ, |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಈಗ ನನಗೆ ತೋರಿಸುತ್ತಿರುವ ನಿಪಿ 2 ಮಹಜರಲ್ಲಿರುವ ಸಹಿ ನನ್ನದು. ಈಗ ನನಗೆ ತೋರಿಸುತ್ತಿರುವ ನಿಪಿ 3 ಭಾವಚಿತ್ರದಲ್ಲಿ ಕಂಡುಬರುತ್ತೇನೆ. ಸದರಿ ಸಹಿಯನ್ನು ಚಾಸಾ 1 ಪುಟ್ಟಸಿದ್ದಮ್ಮರವರ ಮನೆ ಬಳಿ ಮಾಡಿದ್ದೇನೆ. ಭಾವಚಿತ್ರಗಳನ್ನು ಕೂಡ ಅವರ ಮನೆಯಲ್ಲೆ ತೆಗೆಯಲಾಗಿರುತ್ತದೆ. ಸದರಿ ಜಾಗದಲ್ಲಿ ಗಲಾಟೆ ಅಗಿರುತ್ತದೆ. ಯಾರ ನಡುವೆ ಗಲಾಟೆ ಆಗಿತ್ತು ನನಗೆ ಗೊತ್ತಿಲ್ಲ. ಪೊಲೀಸರು ಸ್ಥ,ಳದಿಂದ ಏನು ತೆಗೆದುಕೊಂಡು ಹೋದರು ನನಗೆ ಗೊತ್ತಿಲ್ಲ. ಗಲಾಟೆ ಜಾಗವನ್ನು ನಾವೆ ತೋರಿಸಿದ್ದೇವೆ. ಎಷ್ಟುತ್ತಿನಿಂದ ಎಷ್ಟು ಹೊತ್ತು ವರೆಗೆ ಮಹಜರು ಮಾಡಲಾಯಿತು ಈಗ ನನಗೆ ನೆನಪಿಲ್ಲ. ಆ ಸಮಯದಲ್ಲಿ ನಿಂಗರಾಜು , ಲಿಂಗಯ್ಯ ಅವರು ಕೂಡ ಹಾಜರಿದ್ದರು. ಚಾಸಾ 1 ರವರು ಕೂಡ ಹಾಜರಿದ್ದರು. ಗಲಾಟೆಯ ದಿನ ನಾನು ಸ್ಥಳಕ್ಕೆ

ಹೋಗುವಷ್ಟರಲ್ಲಿ ಗಲಾಟೆ ಮಾಡಿದವರು ಓಡಿಹೋಗಿರುತ್ತಾರೆ. ನಾನು ಪೊಲೀಸರಿಗೆ ಆ ವಿಚಾರ ಹೇಳಿಲ್ಲ. ಆರೋಪಿತರನ್ನು ಗಲಾಟೆ ದಿನ ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2) ಗಲಾಟೆಯು ದಿಃ26.8.2019 ರಂದು ರಾತ್ರಿ 11.30 ಸಮಯದಲ್ಲಿ ಆಗಿರುತ್ತದೆ ಎಂದರೆ ಇರಬಹುದು ನನಗೆ ನೆನಪಿಲ್ಲ. ನಾನು ಗಲಾಟೆ ಶಬ್ದ ಕೇಳಿ ಹೊರಗೆ ಬಂದೆ ಎಂದರೆ ಸರಿ. ಆಗ 5 ಜನ ಯುವಕರು ಅವರ ಮನೆಯಿಂದ ಜೋರಾಗಿ ಬೈದಾಡಿಕೊಂಡು ಹೊರಗೆ ಬಂದರು ಎಂದರೆ ನಾನು ನೋಡಿಲ್ಲ. ಅಷ್ಟರಲ್ಲಿ ಪೊಲೀಸರು ಬಂದರು ಎಂದರೆ ಸರಿಯಲ್ಲ. ಅವರನ್ನು ನೋಡಿ ಆ 5 ಜನ ಯುವಕರು ಅಲ್ಲಿಂದ ಹೊರಟು ಹೋದರು ಎಂದರೆ ಸರಿಯಲ್ಲ. ಗಲಾಟೆಯಾದ ಬಗ್ಗೆ ಕೇಳಲಾಗಿ ಚಾಸಾ 1 ರವರು ಹಣದ ವಿಚಾರದಲ್ಲಿ ಗಲಾಟೆ ಆಗಿತ್ತು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಬಂದು ಗಲಾಟೆ ಮಾಡಿದ ವ್ಯಕ್ತಿಗಳ ಹೆಸರು ಸುನಿಲ , ಚೇತನ , ವಿಜಯಕುಮಾರ , ಅಜಯಕುಮಾರ್ , ಹೇಮಂತ ಮತ್ತು ರಾಜಶೇಖರ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಅವರು ಆರೋಪಿತರಾಗಿರುತ್ತಾರೆ ಎಂದರೆ ಗೊತ್ತಿಲ್ಲ. ಕೃತ್ಯಕ್ಕೆ ಬಳಸಿದ ಮುಮ 1 ನ್ನು ಕೂಡ ಆ ದಿನ ಸ್ಥಳದಲ್ಲಿ ನೋಡಿದ್ದೆ ಎಂದರೆ ಸರಿಯಲ್ಲ. ಅಲ್ಲದೆ ಈ ಬಗ್ಗೆ ನಾನು ಪೊಲೀಸರಿಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಂಗರಾಜುವಿನ ಮನೆಯ ಒಳಗಿಂದ ------------------ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು 30.8.2019 ರಂದು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.9** ಎಂದು ಗುರುತಿಸಲಾಯಿತು. ಆನಂತರ ದಿಃ 28.8.2019 ರಂದು ಪೊಲೀಸರು ಸ್ಥಳ ಮಹಜರಿಗೆ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಚಾಸಾ 1 ರವರ ಮನೆಯನ್ನು

ಪರಿಶೀಲಿಸಿದರು ಎಂದರೆ ಸರಿ. ವಸ್ತುಗ.ಳು ಚಲ್ಲಾಪಿಲ್ಲಿಯಾಗಿದ್ದು ಮತ್ತು ವಾಹನಕ್ಕೆ ಜಖಂ ಆಗಿದುನ್ನು ಪೊಲೀಸರು ಗಮನಿಸಿದರು ಮತ್ತು ಅದಕ್ಕೆ ಮೌಲ್ಯ ಮಾಡಿದರು ಎಂದರೆ ಸರಿ. ಚಾಸಾ **1** ರವರು ಸ್ಥಳ ತೋರಿಸಿದಾಗ ನಿಪಿ **3** ಭಾವಚಿತ್ರ ತೆಗೆಯಲಾಗಿದೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಟಿಡಿಎಂ ವಕೀಲರಿಂದಃ**

**3**) ಸಹಿಯನ್ನುಹೊರತುಪಡಿಸಿ ನಿಪಿ 2 ರ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಘಟನೆಯ ಬಗ್ಗೆ ನನಗೇನು ಗೊತ್ತಿಲ್ಲ ಎಂದರೆ ಸರಿ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ